# ರಸ್ತೆ ಸುರಕ್ಷತೆಯ ಸವಾಲು

ಕಳೆದ ವರ್ಷ ಮೇ ತಿಂಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಮೂವರು ಸದಸ್ಯರನ್ನುಳ್ಳ ರಸ್ತೆ ಸುರಕ್ಷೆ ಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿಯು ಪ್ರತಿಯೊಂದು ರಾಜ್ಯವೂ ಜೂನ್ 30ರೊಳಗೆ ಪ್ರತ್ಯೇಕ ರಸ್ತೆ ಸುರಕ್ಷೆ ನೀತಿಯನ್ನು ರಚಿಸಬೇಕೆಂದು ಸೂಚಿಸಿರುವುದು ಸ್ವಾಗತಾರ್ಹ.

ಭಾರತದಲ್ಲೇಕೆ ಇಷ್ಟೊಂದು ರಸ್ತೆ ಅಪಘಾತಗಳು ನಡೆಯುತ್ತವೆ? ಜಗತ್ತಿನಾದ್ಯಂತ ರಸ್ತೆ ಅಪಘಾತದ ಸಾವುಗಳಲ್ಲಿ ಶೇಕಡಾ 10ರಷ್ಟು ಭಾರತದಲ್ಲೇ ನಡೆಯುತ್ತವೆ ಎನ್ನುತ್ತಿದೆ ಅಂಕಿ ಅಂಶಗಳು! ಆದರೆ ಜಗತ್ತಿನಲ್ಲಿರುವ ಒಟ್ಟು ವಾಹನಗಳ ಸಂಖ್ಯೆಯಲ್ಲಿ ಭಾರತದ ಪಾಲು ಕೇವಲ ಶೇಕಡಾ 1 ಮಾತ್ರವಿದೆ. ಜಾಗತೀಕರಣ ಮತ್ತು ಆರ್ಥಿಕ ಸುಧಾರಣೆಯ ಮಾತುಗಳನ್ನು ನಾವು ಆಡಲು ಶುರುವಾಗಿ ಎರಡು ದಶಕಗಳೇ ಉರುಳಿವೆ. ಆದರೆ ನಮ್ಮ ರಸ್ತೆಗಳು ಇವತ್ತಿಗೂ ಜಾಗತಿಕ ಗುಣಮಟ್ಟದಲ್ಲಿಲ್ಲ. ಚತುಷ್ಪಥ, ಷಟ್ಪಥಗಳನ್ನು ದೇಶದ ಹಲವಾರು ಕಡೆ ನಿರ್ಮಿಸಿದ್ದರೂ, ಅಲ್ಲೂ ಅಪಘಾತಗಳು ನಡೆಯುತ್ತವೆ. ದನಕರುಗಳು ಓಡಾಡುತ್ತವೆ. ಸಿಕ್ಕಲ್ಲೆಲ್ಲ ಜನರು ಅಡ್ಡ ದಾಟುತ್ತಾರೆ. ವಾಹನ ಸವಾರರೂ ಲೈನ್ ಶಿಸ್ತು ಪಾಲಿಸುವುದಿಲ್ಲ. ಸಂಚಾರಿ ನಿಯಮಗಳಂತೂ ಪೊಲೀಸರನ್ನು ಕಂಡಾಗ ಮಾತ್ರ ನೆನಪಾಗುವುದು. ಅಂತರರಾಷ್ಟ್ರೀಯ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಲು ನಮಗೆ ಸಾಧ್ಯವಾದರೂ, ಗುಣಮಟ್ಟದ ವಾಹನ ಚಲಾವಣೆ ನಮ್ಮಿಂದ ಸಾಧ್ಯವೆ? ಪ್ರಯಾಣಿಕರ ರಸ್ತೆ ಸುರಕ್ಷೆ ಖಾತ್ರಿಯಾಗಬೇಕಾದರೆ ಅತ್ಯುತ್ತಮ ರಸ್ತೆಗಳು ಮಾತ್ರವಲ್ಲ, ಅತ್ಯುತ್ತಮ ಚಾಲಕರೂ ಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ.

ಕಳೆದ ವರ್ಷ ಮೇ ತಿಂಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಮೂವರು ಸದಸ್ಯರನ್ನುಳ್ಳ ರಸ್ತೆ ಸುರಕ್ಷೆ ಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿಯು ಪ್ರತಿಯೊಂದು ರಾಜ್ಯವೂ ಜೂನ್ 30ರೊಳಗೆ ಪ್ರತ್ಯೇಕ ರಸ್ತೆ ಸುರಕ್ಷೆ ನೀತಿಯನ್ನು ರಚಿಸಬೇಕೆಂದು ಸೂಚಿಸಿರುವುದು ಸ್ವಾಗತಾರ್ಹ. ಎಲ್ಲ ರಾಜ್ಯಗಳೂ ಇದನ್ನು ಗಂಭೀರವಾಗಿ ಪರಿಗಣಿಸುವ ನಿಟ್ಟಿನಲ್ಲಿ ತ್ರಿಸದಸ್ಯ ಸಮಿತಿಯು ಇನ್ನೂ ಕೆಲವು ಕಟ್ಟುಪಾಡುಗಳನ್ನು ವಿಧಿಸಿದೆ. ರಾಜ್ಯ ಮಟ್ಟದ ಸುರಕ್ಷಾ ಮಂಡಳಿಗಳು ವರ್ಷದಲ್ಲಿ ಎರಡು ಬಾರಿಯಾದರೂ ಸಭೆ ಸೇರಿ, ಆಯಾ ರಾಜ್ಯಗಳ ಶಿಫಾರಸುಗಳಿಗೆ ಸಂಬಂಧಿಸಿ ಕ್ರಮ ಕೈಗೊಂಡಿರುವುದನ್ನು ಪರಿಶೀಲಿಸಬೇಕೆಂದೂ ಸಮಿತಿಯು ಸೂಚಿಸಿದೆ.

ರಸ್ತೆ ಪ್ರಜ್ಞೆಯ ಮಟ್ಟ ನಮ್ಮ ದೇಶದಲ್ಲಿ ಅತ್ಯಂತ ಕಡಿಮೆ ಇರಲು ನಾಗರಿಕರು, ಪೊಲೀಸರು ಮತ್ತು ವಾಹನ ಚಾಲಕರು ಒಟ್ಟಾಗಿ ಕಾರಣರು. ಜತೆಗೆ ರಸ್ತೆ ಕಾಮಗಾರಿ ಇಲಾಖೆ, ಆರೋಗ್ಯ ಇಲಾಖೆ ಮತ್ತು ಸ್ವಯಂಸೇವಾ ಸಂಸ್ಥೆಗಳ ಹೊಣೆಗಾರಿಕೆಯೂ ಇದೆ. ನಮ್ಮಲ್ಲಿ ವಾಹನ ಚಾಲನೆ ಎನ್ನುವುದನ್ನು ಬಹಳಷ್ಟು ನಾಗರಿಕರು ಇವತ್ತಿಗೂ ಗಂಭೀರವಾಗಿ ಪರಿಗಣಿಸಿಲ್ಲ. ಮೂರು ಸಲ ರಸ್ತೆ ನಿಯಮಗಳನ್ನು ಉಲ್ಲಂಘಿಸಿದರೆ ಲೈಸೆನ್ಸ್ ರದ್ದಾಗುತ್ತದೆ ಎಂದು ನಿಯಮ ತಂದರೂ, ಅಪಘಾತಗಳು ಕಡಿಮೆಯಾಗಿಲ್ಲ. ಹಾಗೆಯೇ ರಸ್ತೆ ಅಪಘಾತದಲ್ಲಿ ಮೃತಪಡುವ ಬಹುತೇಕರಿಗೆ ಸೂಕ್ತ ಪರಿಹಾರವೂ ಸಕಾಲಕ್ಕೆ ಸಿಗುವುದಿಲ್ಲ. ಕೇಸು ದಾಖಲಿಸುವ ಪೊಲೀಸರು ಕೂಡಾ ಪರಿಹಾರ ದೊರಕಿಸುವ ಬಗ್ಗೆ ಗಂಭೀರತೆ ಹೊಂದಿರುವುದಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಇರುವಂತೆ ನಮ್ಮಲ್ಲೂ ರಸ್ತೆ ನಿಯಮಗಳ ಉಲ್ಲಂಘನೆಗೆ ಕಠಿಣ ಶಿಕ್ಷೆ ವಿಧಿಸದಿದ್ದರೆ ಪ್ರಯೋಜನವಿಲ್ಲ. ರಸ್ತೆ ನಿಯಮಗಳನ್ನು ಉಲ್ಲಂಘಿಸಿದ ವ್ಯಕ್ತಿ ಎಷ್ಟೇ ದೊಡ್ಡ ಸೆಲೆಬ್ರಿಟಿಯಾದರೂ ಅಲ್ಲಿ ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳುವಂತಿಲ್ಲ. ಹಾಲಿವುಡ್‌ನಲ್ಲಿ ಹಲವಾರು ನಟ– ನಟಿ– ಗಾಯಕಿಯರು ಕುಡಿದ ಮತ್ತಿನಲ್ಲಿ ಕಾರು ಓಡಿಸಿದ್ದಕ್ಕೆ, ಮೊಕದ್ದಮೆ ದಾಖಲಿಸಿ, ಪರಿಹಾರ ಕೇಂದ್ರಗಳಿಗೆ ದಾಖಲಿಸಿ ಕೌನ್ಸೆಲಿಂಗ್ ಮಾಡಿರುವ ಉದಾಹರಣೆಗಳಿವೆ. ನಮ್ಮಲ್ಲಿ ಒಬ್ಬ ಸಲ್ಮಾನ್ ಖಾನ್‌ನ ಗುದ್ದೋಡು ಪ್ರಕರಣಕ್ಕೆ 12 ವರ್ಷಗಳಾದರೂ ಇನ್ನೂ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಆಗಿಲ್ಲ.

ದೇಶದಾದ್ಯಂತ ಎಕ್ಸ್‌ಪ್ರೆಸ್ ಹೆದ್ದಾರಿಗಳು ನಿರ್ಮಾಣವಾಗುತ್ತಿವೆ. ಮಾರುಕಟ್ಟೆಗೆ ಬರುತ್ತಿರುವ ಹೊಸ ತಂತ್ರಜ್ಞಾನದ ವಾಹನಗಳೂ ಸೆಕೆಂಡುಗಳಲ್ಲಿ ವೇಗವನ್ನು ತ್ರಿಗುಣಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ. ಸಹಜವಾಗಿಯೇ ರಸ್ತೆಗಳಲ್ಲಿ ವಾಹನಗಳ ಗರಿಷ್ಠ ವೇಗಮಿತಿಯನ್ನೂ ಹೆಚ್ಚಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಸ್ತೆಯಲ್ಲಿ ಅಶಿಸ್ತು ಪ್ರದರ್ಶಿಸಿದರೆ ಅತ್ಯಂತ ದುಬಾರಿ ಬೆಲೆ ತೆರಬೇಕಾಗಬಹುದು. ಸುಪ್ರೀಂಕೋರ್ಟಿನ ತ್ರಿಸದಸ್ಯ ಸಮಿತಿಯು ಈ ನಿಟ್ಟಿನಲ್ಲಿ ಕ್ರಿಯಾ ಯೋಜನೆಯೊಂದನ್ನು ಸಿದ್ಧಪಡಿಸಿದೆ. ಅದಕ್ಕೂ ಮುನ್ನ ಪ್ರತಿಯೊಂದು ರಾಜ್ಯ ಸರ್ಕಾರಗಳ ಅಧಿಕಾರಿಗಳು ಮತ್ತು ಪ್ರತಿನಿಧಿಗಳ ಜತೆಗೆ ವಿಸ್ತೃತ ಚರ್ಚೆಯನ್ನೂ ನಡೆಸಿದೆ. ಈ ಹಿನ್ನೆಲೆಯಲ್ಲಿ ರಸ್ತೆ ಸುರಕ್ಷೆಯ ಕುರಿತು ಕೆಲವು ಗಮನಾರ್ಹ ಬದಲಾವಣೆಗಳು ಆಗಬಹುದು ಎಂಬ ನಿರೀಕ್ಷೆಯೂ ಮೂಡಿದೆ.

■ ಬಿ.ಎಂ. ಹನೀಫ್



ಈಶ್ವರ್